ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

**ಪತ್ರಿಕಾ ತುಣುಕುಗಳು**

**PAPER CLIPPINGS**

13

ಇಲಾಖೆ / ವಿಷಯ : DEPARTMENT / SUBJECT: [illegible]

ಪತ್ರಿಕೆಯ ಹೆಸರು : NAME OF THE NEWS PAPER: ಕನ್ನಡಪ್ರಭ    ದಿನಾಂಕ : DATE : 21/11/20

# ಮರಾಠ ನಿಗಮ ರದ್ದತಿಗೆ ನ.30 ಗಡುವು: ತಪ್ಪಿದರೆ ಡಿ.5ಕ್ಕೆ ಬಂದ್

## ರಾಜ್ಯ ಸರ್ಕಾರಕ್ಕೆ ಕನ್ನಡಪರ ಸಂಘಟನೆಗಳಿಂದ ಎಚ್ಚರಿಕೆ

• **ಕನ್ನಡಪ್ರಭ ವಾರ್ತೆ** ಬೆಂಗಳೂರು

ಮರಾಠ ಸಮುದಾಯ ನಿಗಮ ಸ್ಥಾಪನೆ ವಿರುದ್ಧ ಕರ್ನಾಟಕ ಬಂದ್ ನಡೆಸಲು ಕನ್ನಡಪರ ಸಂಘಟನೆಗಳು ಸಜ್ಜಾಗಿದ್ದು, ಇದಕ್ಕೂ ಮುನ್ನ ಈ ನಿರ್ಧಾರ ಪುನರ್ ಪರಿಶೀಲಿಸಲು ಸರ್ಕಾರಕ್ಕೆ ನವೆಂಬರ್ ಅಂತ್ಯದವರೆಗೂ ಗಡುವು ನೀಡಿವೆ. ಈ ಗಡುವಿನೊಳಗೆ ಸರ್ಕಾರ ನಿರ್ಧಾರ ಬದಲಿಸದಿದ್ದರೆ ಡಿ.5 ರಂದು ಬಂದ್ ನಡೆಸಲು ತೀರ್ಮಾನಿಸಿವೆ.

ಶುಕ್ರವಾರ ನಗರದ ಖಾಸಗಿ ಹೋಟೆಲ್‌ನಲ್ಲಿ ಕನ್ನಡ ಸಂಘಟನೆಗಳ ಒಕ್ಕೂಟದ ಅಧ್ಯಕ್ಷ ವಾಟಾಳ್ ನಾಗರಾಜ್ ನೇತೃತ್ವದ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಯಿತು. ಇದೇ ವೇಳೆ ಕನ್ನಡ ಭಾಷೆ, ನಾಡು, ನುಡಿಯ ಉಳಿವಿಗಾಗಿ ರಾಜ್ಯದ ಗಡಿ ಭಾಗಗಳಲ್ಲಿ ಪ್ರತಿಭಟಿಸಲು ತೀರ್ಮಾನಿಸಲಾಯಿತು.

ಸಭೆಯ ಬಳಿಕ ವಾಟಾಳ್ ನಾಗರಾಜ್ ಮಾತನಾಡಿ, ಮರಾಠ ನಿಗಮ ಮಾಡಿರುವ ಯಡಿಯೂರಪ್ಪ ತಕ್ಷಣ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಬೇಕು. 8

### ಕರವೇ ಇನ್ನೂ ನಿರ್ಧಾರ ಇಲ್ಲ



ನ.25ಕ್ಕೆ 30 ಜಿಲ್ಲೆಗಳ ಕರವೇ ಜಿಲ್ಲಾಧ್ಯಕ್ಷರು, 224 ವಿಧಾನಸಭಾ ಕ್ಷೇತ್ರಗಳ ಅಧ್ಯಕ್ಷರ ಸಭೆ ಕರೆಯಲಾಗಿದೆ. ಬಂದ್‌ನಲ್ಲಿ ಭಾಗಿ ಆಗಬೇಕೋ, ಬೇಡವೋ ಎಂದು ಚರ್ಚಿಸಿ ನಿರ್ಧರಿಸುತ್ತೇವೆ. ಮರಾಠ ಸಮುದಾಯ ನಿಗಮ ರಚನೆ ನಿರ್ಧಾರದ ವಿರುದ್ಧ ಸರ್ಕಾರಿ ಕಾರ್ಯಕ್ರಮಗಳಲ್ಲಿ ಕಪ್ಪು ಪಟ್ಟಿ ಪ್ರದರ್ಶನ ಮಾಡಲಾಗುವುದು.

• **ಟಿ.ಎ.ನಾರಾಯಣ ಗೌಡ** ಕರವೇ ಅಧ್ಯಕ್ಷ

# ಮರಾಠ ನಿಗಮ ರದ್ದತಿಗೆ ನ.30 ಗಡುವು: ತಪ್ಪಿದರೆ ಡಿ.5ಕ್ಕೆ ಬಂದ್

ಮೊದಲ ಪುಟದಿಂದ

ಜೊತೆಗೆ, ಮರಾಠ ನಿಗಮವನ್ನು ವಾಪಸ್ ಪಡೆಯಬೇಕು ಎಂದು ಆಗ್ರಹಿಸಿದರು. ಕನ್ನಡಿಗರಿಗೆ ಮಾರಕವಾದ ಈ ನಿರ್ಧಾರವನ್ನು ಹಿಂಪಡೆಯಲು ಮುಖ್ಯಮಂತ್ರಿಯವರಿಗೆ ಮತ್ತೊಂದು ಅವಕಾಶ ನೀಡುತ್ತಿದ್ದೇವೆ. ನವೆಂಬರ್ ಅಂತ್ಯದ ವೇಳೆಗೆ ಮರಾಠ ನಿಗಮ ಸ್ಥಾಪಿಸುವ ನಿರ್ಧಾರ ಹಿಂಪಡೆಯಬೇಕು. ಇಲ್ಲದಿದ್ದರೆ ಬಂದ್ ನಡೆಸುವುದು ಶತಃಸಿದ್ಧ ಎಂದು ಘೋಷಿಸಿದರು.

ಶುಕ್ರವಾರ ನಡೆದ ಸಭೆಯಲ್ಲಿ ಕನ್ನಡ ಒಕ್ಕೂಟ ಡಿ.5ರಂದು ಕರೆದಿರುವ ಬಂದ್‌ಗೆ ಎಲ್ಲ ಕನ್ನಡ ಪರ ಸಂಘಟನೆಗಳು ಒಪ್ಪಿಗೆ ನೀಡಿದೆ. ಅಂದು ಬೆಳಗ್ಗೆ 6ರಿಂದ ಸಂಜೆ 6 ರವರೆಗೆ ರಾಜ್ಯ ಸಂಪೂರ್ಣ ಬಂದ್ ಆಗಲಿದೆ. ನಗರದ ಪುರಭವನದಿಂದ ಸ್ವಾತಂತ್ರ್ಯ ಉದ್ಯಾನದವರೆಗೆ ರ್‍ಯಾಲಿ ನಡೆಯಲಿದೆ. ಬಂದ್ ಆಚರಣೆ ವೇಳೆ ಹೋರಾಟಗಾರರನ್ನು ಜೈಲಿಗೆ ಹಾಕುವ ಮನಸ್ಸಿದ್ದರೆ ಹಾಕಲಿ. ಆದರೆ, ಮರಾಠ ನಿಗಮ ಸ್ಥಾಪನೆಗೆ ಕನ್ನಡಿಗರ ವಿರೋಧವಿದೆ. ಈಗಾಗಲೇ 900ಕ್ಕೂ ಹೆಚ್ಚು ಸಂಘಟನೆಗಳು ಬೆಂಬಲ ಸೂಚಿಸಿವೆ. ರಾಜ್ಯದ ಜನತೆಯೇ ಬಂದ್ ಆಚರಣೆ ಮಾಡಲಿದ್ದಾರೆ ಎಂದು ಹೇಳಿದರು. ಇನ್ನು ಬಂದ್‌ಗೆ ಬೆಂಬಲ ನೀಡದವರ ಮನೆಗೆ ಹೋಗಿ ಅವರ ಮನವೊಲಿಸುತ್ತೇನೆ. ಹೋಟೆಲ್ ಮಾಲಿಕರು ಹಟ ಮಾಡುವುದು ಸರಿಯಲ್ಲ. ಬಸ್‌ಗಳ ಸಂಚಾರಕ್ಕೆ ಅವಕಾಶ ಕೊಡುವುದಿಲ್ಲ. ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಸಂಚಾರ ನಿಲ್ಲಿಸಬೇಕು. ರೈತ ಸಂಘಟನೆಗಳು ಕರ್ನಾಟಕ ಬಂದ್ ಬೆಂಬಲಿಸಬೇಕು. ಬಂದ್ ಆಚರಣೆ ಬಳಿಕ ಜೈಲ್ ಭರೋ ಚಳವಳಿ ಮಾಡುತ್ತೇವೆ ಎಂದು ತಿಳಿಸಿದರು. ಸಭೆಯಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಮುಖ್ಯಮಂತ್ರಿ ಚಂದ್ರು, ಕನ್ನಡ ಪರ ಸಂಘಟನೆಗಳ ಒಕ್ಕೂಟದ ಸದಸ್ಯರಾದ ಸಾ.ರಾ.ಗೋವಿಂದು, ಕೆ.ಆರ್.ಕುಮಾರ್ ಮತ್ತು ಶಿವರಾಮೇಗೌಡ ಸೇರಿದಂತೆ ಹಲವರು ಭಾಗಿಯಾಗಿದ್ದರು.

## ಮನು ಬಳಿಗಾರ್ ಕುರಿತು ಆಕ್ಷೇಪ



ಕನ್ನಡಪರ ಸಂಘಟನೆಗಳು ಕರೆದಿದ್ದ ಶುಕ್ರವಾರದ ಸಭೆಗೆ ಗೈರು ಹಾಜರಾಗಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷ ಮನು ಬಳಿಗಾರ್ ನಡವಳಿಕೆಗೆ ವಾಟಾಳ್ ನಾಗರಾಜ್ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ವರ್ಷಕ್ಕೊಂದು ಬಾರಿ ಸಾಹಿತ್ಯ ಸಮ್ಮೇಳನ ನಡೆಸುವುದಕ್ಕಾಗಿ ಮಾತ್ರ ಕನ್ನಡ ಸಾಹಿತ್ಯ ಪರಿಷತ್ ಇದೆಯೇ? ಕನ್ನಡಕ್ಕೆ ಸಂಕಷ್ಟ ಬಂದಾಗ ಹೋರಾಟ ಮಾಡಬಾರದೆ? ಕಸಾಪ ಅಧ್ಯಕ್ಷ ಮನು ಬಳಿಗಾರ್ ಅವರನ್ನು ಸಭೆಗೆ ಆಹ್ವಾನಿಸಿದ್ದರೂ ಹಾಜರಾಗಿಲ್ಲ. ಈ ಬೆಳವಣಿಗೆ ಅತ್ಯಂತ ಬೇಸರ ತಂದಿದೆ ಎಂದರು.

## ಒಂದೊಂದು ದಿನ ಒಂದೊಂದು ಗಡಿ ಬಂದ್

ಪ್ರತಿಭಟನೆಯ ಭಾಗವಾಗಿ ಬೆಳಗಾವಿ, ಹುಬ್ಬಳ್ಳಿ, ಧಾರಾವಾಡ ಸೇರಿದಂತೆ ರಾಜ್ಯದ ಎಲ್ಲ ಗಡಿಗಳಿಗೂ ಕನ್ನಡ ಒಕ್ಕೂಟದ ನಾಯಕರು ಭೇಟಿ ನೀಡುವರು. ಈ ಎಲ್ಲಾ ಗಡಿ ಭಾಗದಲ್ಲೂ ಒಂದೊಂದು ದಿನ ಬಂದ್ ಮಾಡಲಾಗುವುದು ಎಂದು ವಾಟಾಳ್ ನಾಗರಾಜ್ ತಿಳಿಸಿದರು. ನ.23ರಂದು ಬಳ್ಳಾರಿ, 24ರಂದು ಕೊಪ್ಪಳ, 25ರಂದು ಹುಬ್ಬಳ್ಳಿ-ಧಾವರಾಡ, 26ರಂದು ಅತ್ತಿಬೆಲೆ, 27ರಂದು ಕೆ.ಆರ್.ಪುರ, 30ರಂದು ಮೈಸೂರು ಬ್ಯಾಂಕ್ ವೃತ್ತದಲ್ಲಿ ಪ್ರತಿಭಟನೆ ನಡೆಯಲಿದೆ. ಡಿ.1ರಂದು ಬೆಳಗಾವಿ, 2ರಂದು ದಾವಣಗೆರೆ, 3ರಂದು ತುಮಕೂರು, ಮಂಡ್ಯ, ಮೈಸೂರು ಮತ್ತು 4ರಂದು ಚಾಮರಾಜನಗರ ಗಡಿಗಳನ್ನು ಬಂದ್ ಮಾಡಿ ಪ್ರತಿಭಟಿಸುವುದಾಗಿ ಹೇಳಿದರು.

## ರಾಜ್ಯ ಬಂದ್: ಕನ್ನಡ ಸಂಘಗಳಲ್ಲಿ ಒಡಕು

ಬೆಂಗಳೂರು: ಮರಾಠ ಸಮುದಾಯ ನಿಗಮ ರಚನೆ ಮಾಡಿರುವುದನ್ನು ಖಂಡಿಸಿ ಕರ್ನಾಟಕ ಬಂದ್ ಮಾಡುವ ಕುರಿತು ಕನ್ನಡಪರ ಸಂಘಟನೆಗಳಲ್ಲಿ ಬಿರುಕು ಕಾಣಿಸಿಕೊಂಡಿದೆ. ವಾಟಾಳ್ ನಾಗರಾಜ್ ಅಧ್ಯಕ್ಷತೆಯ ಕನ್ನಡ ಪರ ಸಂಘಟನೆಗಳ ಒಕ್ಕೂಟ ಕರೆ ನೀಡಿರುವ ಈ ಬಂದ್ ಬಗ್ಗೆ ಪ್ರಮುಖ ಕನ್ನಡ ಪರ ಸಂಘಟನೆಯಾದ ಟಿ.ಎ. ನಾರಾಯಣ ಗೌಡ ನೇತೃತ್ವದ ಕರ್ನಾಟಕ ರಕ್ಷಣಾ ವೇದಿಕೆ ಇನ್ನೂ ಯಾವುದೇ ತೀರ್ಮಾನ ಕೈಗೊಂಡಿಲ್ಲ. ಆರಂಭದಲ್ಲಿ ಈ ಬಂದ್‌ನಿಂದ ಅಂತರ ಕಾಯ್ದುಕೊಂಡು ಕೇವಲ ಕಪ್ಪು ಪಟ್ಟಿ ಧರಿಸಿ ಸರ್ಕಾರದ ನಿರ್ಧಾರ ವಿರೋಧಿಸುವ ತೀರ್ಮಾನವನ್ನು ಕರವೇ ತೆಗೆದುಕೊಂಡಿತ್ತು. ಅನಂತರ ನಿಲುವು ಬದಲಾಯಿಸಿದೆ. ನ.25ರಂದು ತನ್ನ ಪದಾಧಿಕಾರಿಗಳ ಸಭೆ ಕರೆದು, ಈ ಸಭೆಯಲ್ಲಿ ಬಂದ್‌ನಲ್ಲಿ ಪಾಲ್ಗೊಳ್ಳುವುದೋ ಬೇಡವೋ ಎಂಬ ತೀರ್ಮಾನ ಕೈಗೊಳ್ಳುವುದಾಗಿ ಘೋಷಿಸಿದೆ. ಇನ್ನು ಪ್ರವೀಣ್ ಶೆಟ್ಟಿ ನೇತೃತ್ವದ ಕರವೇಯ ಮತ್ತೊಂದು ಬಣ ಬಂದ್‌ನಿಂದ ಅಂತರ ಕಾಯ್ದುಕೊಂಡಿದೆ.